# ಎನ್ಐಟಿಕೆ: ಸಾಂಸ್ಕೃತಿಕ ಉತ್ಸವ 'ಇನ್ಸಿಡೆಂಟ್ -25' ಉದ್ಘಾಟನೆ



**ಸುರತ್ಕಲ್, ಮಾ. 7:** ಸುರತ್ಕಲ್‌ನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಇಲ್ಲಿ ಭಾರತದ ಭವ್ಯ ಸಾಂಸ್ಕೃತಿಕ ಉತ್ಸವ 'ಇನ್ಸಿಡೆಂಟ್ -25' ಉದ್ಘಾಟನೆಗೊಂಡಿತು.

ಸಂಸತ್ ಸದಸ್ಯ ಕ್ಯಾಪ್ಟನ್ ಬ್ರಿಜೇಶ್ ಚೌಟ ಉದ್ಘಾಟಿಸಿ, ದಕ್ಷಿಣ ಕನ್ನಡದ ಯಾವುದೇ ವಿದ್ಯಾರ್ಥಿಗೆ, ಎನ್ಐಟಿಕೆ ಒಂದು ಮಹತ್ವಾಕಾಂಕ್ಷೆಯ ಸಂಸ್ಥೆಯಾಗಿದೆ. ಯುವಕರ ಅಪರಿಮಿತ ಶಕ್ತಿಯನ್ನು ಇಂತಹ ಸಂಸ್ಥೆಗಳು ಹೊರತರುವ ಕೆಲಸ ಮಾಡುತ್ತಿವೆ. ಎನ್ಐಟಿಕೆ ಅಕಾಡೆಮಿ ಫಾರ್ ಡಿಫೆನ್ಸ್, ಅಡ್ವೆಂಚರ್ ಆ್ಯಂಡ್ ಲೀಡರ್ಶಿಪ್ ಅನ್ನು ಶ್ಲಾಘಿಸಿ, ನಡಾಲ್ ನಾಯಕರನ್ನು ಬೆಳೆಸುವ ಪ್ರಮುಖ ಅಕಾಡೆಮಿಯಾಗಬೇಕು. ಭಾರತಕ್ಕೆ ರಾಜಕೀಯ ಮಾತ್ರವಲ್ಲ, ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ನಾಯಕರ ಅಗತ್ಯವಿದೆ. ನಾಯಕನ ಅಗ್ರಗಣ್ಯ ಗುಣವೆಂದರೆ ವೃತ್ತಿಪರ ಸಾಮರ್ಥ್ಯ ಮತ್ತು ಜ್ಞಾನ. ನೀವು ಭಾರತದ ಭವಿಷ್ಯ, ನಮ್ಮ ಪ್ರಧಾನಿ ಆಗಾಗ್ಗೆ ಹೇಳುವಂತೆ, ಭಾರತವು ವಿಶ್ವದ ಭವಿಷ್ಯವಾಗಿದೆ. ಮುಂದಿನ 25 ವರ್ಷಗಳು ಭಾರತದ ಅಮೃತ ಕಾಲವಾಗಲಿದೆ. ಈ ಅವಧಿಯಲ್ಲಿ ಭಾರತವು ಜಾಗತಿಕ ನಾಯಕತ್ವವನ್ನು ವಹಿಸಿಕೊಳ್ಳುತ್ತದೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ಎನ್ಐಟಿಕೆ ನಿರ್ದೇಶಕ ಪ್ರೊ| ಬಿ. ರವಿ ಅಧ್ಯಕ್ಷತೆ ವಹಿಸಿದ್ದರು. ಕ್ಯಾ| ಗಣೇಶ್ ಕಾರ್ಣಿಕ್, 'ಡೆಲ್'ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಮತ್ತು ಎನ್ಐಟಿಕೆ ಹಳೆಯ ವಿದ್ಯಾರ್ಥಿ ಅಲೋಕ್ ಓಹ್ರಿ, ವಿದ್ಯಾರ್ಥಿ ಕಲ್ಯಾಣ, ಡೀನ್ ಪ್ರೊ| ಎ.ಸಿ. ಹೆಗ್ಡೆ ಎನ್ಐಟಿಕೆಯ ಬೋಧಕರು ಮತ್ತು ಸಿಬಂದಿ ಭಾಗವಹಿಸಿದ್ದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಾಲ್ಕು ದಿನಗಳ ಕಾಲ ಇನ್ಸಿಡೆಂಟ್ -25 ನಡೆಯಲಿದೆ.

Udayavani, Date: 08/03/25, p, no - 03